**C**

**CCE PF**
**CCE PR**
**REVISED**


**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಮಾರ್ಚ್ / ಏಪ್ರಿಲ್, 2019**

**S.S.L.C. EXAMINATION, MARCH / APRIL, 2019**


# ಮಾದರಿ ಉತ್ತರಗಳು

# MODEL ANSWERS

ದಿನಾಂಕ : 04. 04. 2019 ] **ಸಂಕೇತ ಸಂಖ್ಯೆ : 62-K**

Date : 04. 04. 2019 ] **CODE NO. : 62-K**

## ವಿಷಯ : ತೃತೀಯ ಭಾಷೆ — ಕನ್ನಡ

## Subject : Third Language — KANNADA

**(ಹೊಸ ಪಠ್ಯಕ್ರಮ / New Syllabus)**

**(ಖಾಸಗಿ ಅಭ್ಯರ್ಥಿ & ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Fresh & Private Repeater)**

**[ ಗರಿಷ್ಠ ಅಂಕಗಳು : 100**

**[ Max. Marks : 100**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಎ'**<br>**(ಗದ್ಯ, ಪದ್ಯ, ಪೂರಕ ಅಧ್ಯಯನ)**<br>**ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ (ವಾಕ್ಯ ರೂಪದಲ್ಲಿರುವ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) :** | 16 × 1 = 16 |
| 1. | ಭಾರತದಲ್ಲಿ ಅಲೆಮಾರಿಗಳು ರಾತ್ರಿವೇಳೆಯಲ್ಲಿ ತಂಗಲು ಇರುವ ಸ್ಥಳಗಳಾವುವು ?<br>***ಉತ್ತರ :***<br>ಭಾರತದಲ್ಲಿ ಅಲೆಮಾರಿಗಳು ರಾತ್ರಿವೇಳೆಯಲ್ಲಿ ತಂಗಲು ಇರುವ ಸ್ಥಳಗಳು ಛತ್ರ, ಧರ್ಮಶಾಲೆ, ದೇವಾಲಯ, ತೋಪು, ಸಾರ್ವಜನಿಕ ಚಾವಡಿ, ಅಂಗಡಿ, ರೈಲ್ವೆ ಸ್ಟೇಷನ್, ವಿಮಾನ ನಿಲ್ದಾಣ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 2. | ಅಮೆರಿಕಾದ ಪೊಲೀಸರು ಭಾರತದ ಪೊಲೀಸರ ಬಗ್ಗೆ ಗೊರೂರರಲ್ಲಿ ಯಾವ ವಿಚಾರವನ್ನು ಕೇಳಿ ತಿಳಿದುಕೊಂಡರು ?<br>***ಉತ್ತರ :***<br>ಅಮೆರಿಕಾದ ಪೊಲೀಸರು ಭಾರತದ ಪೊಲೀಸರ ಬಗ್ಗೆ ಅವರ ಸಂಬಳ, ಸಾರಿಗೆ ವಿಷಯವನ್ನು ಕೇಳಿ ತಿಳಿದುಕೊಂಡರು. | |
| 3. | ಕೊಡಗಿನ ಗೌರಮ್ಮನವರ ವಿವಾಹವು ಯಾರೊಡನೆ ಆಯಿತು ?<br>***ಉತ್ತರ :***<br>ಕೊಡಗಿನ ಗೌರಮ್ಮನವರ ವಿವಾಹವು ಶುಂಠಿಕೊಪ್ಪದ ಶ್ರೀ ಬಿ.ಟಿ. ಗೋಪಾಲಕೃಷ್ಣಯ್ಯನವರೊಡನೆ ಆಯಿತು. | |
| 4. | ಆರ್. ಕಲ್ಯಾಣಮ್ಮ ಯಾರು ?<br>***ಉತ್ತರ :***<br>ಆರ್. ಕಲ್ಯಾಣಮ್ಮ ಪ್ರಸಿದ್ಧ ಸಾಮಾಜಿಕ ಕಾರ್ಯಕರ್ತೆ ಮತ್ತು ಲೇಖಕಿ. | |
| 5. | ಗಾಂಧೀಜಿಯವರು ಕೊಟ್ಟ ಮಂತ್ರ ಯಾವುದು ?<br>***ಉತ್ತರ :***<br>ಗಾಂಧೀಜಿಯವರು ಕೊಟ್ಟ ಮಂತ್ರ 'ಮಾಡು, ಇಲ್ಲವೆ ಮಡಿ'. | |
| 6. | ಸತ್ಯಾಗ್ರಹಿಗಳನ್ನು ಚದುರಿಸಲು ಕುಲಕರ್ಣಿಯವರು ಏನು ಮಾಡಿದರು ?<br>***ಉತ್ತರ :***<br>ಸತ್ಯಾಗ್ರಹಿಗಳನ್ನು ಚದುರಿಸಲು ಕುಲಕರ್ಣಿಯವರು ಗಾಳಿಯಲ್ಲಿ ಗುಂಡು ಹಾರಿಸಿದರು. | |
| 7. | ಸಂನ್ಯಾಸಿಯ ವೇಷ ಧರಿಸಿದ ಮಲ್ಲಮ್ಮಾಜಿಯ ಸರದಾರ ಯಾರು ?<br>***ಉತ್ತರ :***<br>ಸಂನ್ಯಾಸಿಯ ವೇಷ ಧರಿಸಿದ ಮಲ್ಲಮ್ಮಾಜಿಯ ಸರದಾರ ಶಾಂತಯ್ಯ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 8. | 'ಭೂಮಿತಾಯ ಕುಡಿಗಳು' ಪದ್ಯದಲ್ಲಿ ಕವಿ ಯಾರು ಯಾರು ಒಂದೇ ಎಂದು ಹೇಳಿದ್ದಾರೆ ? | |
| | ***ಉತ್ತರ :*** | |
| | 'ಭೂಮಿತಾಯ ಕುಡಿಗಳು' ಪದ್ಯದಲ್ಲಿ ನಾವು, ನೀವು, ಅವರು, ಇವರು ಎಲ್ಲ ಒಂದೇ ಎಂದು ಹೇಳಿದ್ದಾರೆ. | |
| 9. | ರಸ ಕವಿತ್ವ ಒಂದೇ ಆದರೂ ಅದರ ರಚನೆಗೆ ಬಳಕೆಯಾಗುತ್ತಿರುವ ಛಂದೋ ಪ್ರಕಾರಗಳು ಯಾವುವು ? | |
| | ***ಉತ್ತರ :*** | |
| | ರಸ ಕವಿತ್ವ ಒಂದೇ ಆದರೂ ಅದರ ರಚನೆಗೆ ಬಳಕೆಯಾಗುತ್ತಿರುವ ಛಂದೋ ಪ್ರಕಾರಗಳು ಕಂದ, ವೃತ್ತ, ತ್ರಿಪದಿ, ವಚನ. | |
| 10. | ಸಿ.ಪಿ.ಕೆ.ಯವರು ಗ್ರಂಥಗಳನ್ನು ಯಾವುದರ ಪಳೆಯುಳಿಕೆ ಎಂದಿದ್ದಾರೆ ? | |
| | ***ಉತ್ತರ :*** | |
| | ಸಿ.ಪಿ.ಕೆ.ಯವರು ಗ್ರಂಥಗಳನ್ನು ಹಿರಿಬಾಳುಗಳ ಪಳೆಯುಳಿಕೆ ಎಂದಿದ್ದಾರೆ. | |
| 11. | ಬಸವಣ್ಣನವರು ಸ್ವರ್ಗದ ಕಲ್ಪನೆ ಎಲ್ಲರೂ ಮೆಚ್ಚುವಂತಹುದು ಏಕೆ ? | |
| | ***ಉತ್ತರ :*** | |
| | ಬಸವಣ್ಣನವರ ಆಚಾರವೇ ಸ್ವರ್ಗ ಎಂದು ಹೇಳಿರುವುದನ್ನು ಎಲ್ಲರೂ ಮೆಚ್ಚಬಹುದಾಗಿದೆ. | |
| 12. | ಬಸವಣ್ಣನವರು ಯಾವುದನ್ನು ದೇವಲೋಕ ಎಂದಿದ್ದಾರೆ ? | |
| | ***ಉತ್ತರ :*** | |
| | ಬಸವಣ್ಣನವರು ಸತ್ಯವನ್ನು ನುಡಿಯುವುದೇ ದೇವಲೋಕ ಎಂದು ಹೇಳಿದ್ದಾರೆ. | |
| 13. | ಸೋಮನಾಥನು ಹೇಳಿರುವಂತೆ ಬೇರೆಯವರು ಸಾಲಕ್ಕೆ ಯಾವಾಗ ಹೊಣೆಯಾಗಬಹುದು ? | |
| | ***ಉತ್ತರ :*** | |
| | ಸೋಮನಾಥನು ಹೇಳಿರುವಂತೆ ತನ್ನ ಕೈಯಿಂದ ದಂಡ ತೆರುವ ಸಾಮರ್ಥ್ಯವಿರುವಾಗ ಮಾತ್ರ ಬೇರೆಯವರ ಸಾಲಕ್ಕೆ ಹೊಣೆಯಾಗಬಹುದು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 14. | ಪುಲಿಗೆರೆ ಸೋಮನಾಥ ಹೇಳಿರುವಂತೆ ಋಷಿಯಲ್ಲಿ ಯಾವ ಗುಣವಿರಬೇಕು ? | |
| | ***ಉತ್ತರ :*** | |
| | ಪುಲಿಗೆರೆ ಸೋಮನಾಥ ಹೇಳಿರುವಂತೆ ಋಷಿಯಲ್ಲಿ ಇರಬೇಕಾದ ಗುಣ ಪರಿಶುದ್ಧತೆ. | |
| 15. | ಧರ್ಮಪದನು ಯಾವ ದೇವಾಲಯದ ಕಲಶವನ್ನು ಜೋಡಿಸಿದನು ? | |
| | ***ಉತ್ತರ :*** | |
| | ಧರ್ಮಪದನು ಕೋನಾರ್ಕ್ ದೇವಾಲಯದ ಮಹಾದ್ವಾರದ ಕಲಶವನ್ನು ಜೋಡಿಸಿದನು. | |
| 16. | ಗಿಡುಗ ರೆಕ್ಕೆಯನ್ನು ಬಡಿದುಕೊಳ್ಳುತ್ತ ಸಾವನ್ನಪ್ಪಿತು ಏಕೆ ? | |
| | ***ಉತ್ತರ :*** | |
| | ಗಿಡುಗ ವಿಷದ ರೊಟ್ಟಿಯನ್ನು ತಿಂದ ಕಾರಣ ರೆಕ್ಕೆಯನ್ನು ಬಡಿದುಕೊಳ್ಳುತ್ತ ಸಾವನ್ನಪ್ಪಿತು. | |
| | **ಮೂರು–ನಾಲ್ಕು ವಾಕ್ಯದಲ್ಲಿ ಉತ್ತರಿಸುವಿಕೆ :** | |
| | (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕ ನೀಡುವುದು) | $14 \times 2 = 28$ |
| 17. | ಮಿನಿ ಪೊಲೀಸ್ ನಗರದ ಪೊಲೀಸರು ಗೊರೂರರನ್ನು ಹೇಗೆ ಉಪಚರಿಸಿದರು ? | |
| | ***ಉತ್ತರ :*** | |
| | ಮಿನಿ ಪೊಲೀಸ್ ನಗರದ ಪೊಲೀಸರು ಗೊರೂರರನ್ನು ತಮ್ಮ ಕಾರಿನಲ್ಲೇ ಮನೆಗೆ ಕರೆದುಕೊಂಡು ಹೋದರು. ಅಲ್ಲಿ ಬ್ರೆಡ್, ಹಾಲು, ಹಣ್ಣು, ಬಿಸ್ಕತ್‌ಗಳನ್ನು ರಾತ್ರಿ ಊಟಕ್ಕೆ ನೀಡಿ ಉಪಚರಿಸಿದರು. ಮನೆಯ ಹಾಸಿಗೆ ಬಳಸದೆ ಧೂಳು ತುಂಬಿದೆ. ಆದ್ದರಿಂದ ಗಾಳಿ, ಬೆಳಕು, ಸ್ವಚ್ಛವಾದ ಹಾಸಿಗೆ ಇರುವ ಲಾಕಪ್‌ನಲ್ಲಿ ಮಲಗಿ ವಿಶ್ರಮಿಸಿ ಎಂದು ಹೇಳಿ ಗೊರೂರನ್ನು ಉಪಚರಿಸಿದರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 18. | ಗೌರಮ್ಮನವರು ಗಾಂಧೀಜಿಯವರು ತಮ್ಮ ಮನೆಗೆ ಬರುವಂತೆ ಹೇಗೆ ಮಾಡಿದರು ?<br>*ಉತ್ತರ :*<br>ಕೊಡಗಿನ ಗೌರಮ್ಮನವರು ಗಾಂಧೀಜಿಯವರ ಪರಮ ಅನುಯಾಯಿಯಾಗಿದ್ದರು. 1933 ರಲ್ಲಿ ಗಾಂಧೀಜಿಯವರು ಕೊಡಗಿನಲ್ಲಿ ಎರಡು ದಿನ ತಂಗಿದ್ದರು. ಆಗ ಗೌರಮ್ಮನವರು ತಮ್ಮಂತಹ ಸಾಧಾರಣ ಕುಟುಂಬದವರ ಮನೆಗೂ ಗಾಂಧೀಜಿ ಬರಬೇಕೆಂದು ಉಪವಾಸ ಸತ್ಯಾಗ್ರಹ ಮಾಡಿದರು. ಆಗ ಕಿತ್ತಲೆ ಹಣ್ಣು ನೀಡಿ ಅವರ ಉಪವಾಸ ಅಂತ್ಯಗೊಳಿಸಿದ ಗಾಂಧೀಜಿ ಗೌರಮ್ಮನವರ ಮನೆಗೂ ಬಂದಿದ್ದರು. | |
| 19. | ಗಾಂಧೀಜಿಯವರು ಅವಾಕ್ಕಾಗಲು ಕಾರಣವೇನು ?<br>*ಉತ್ತರ :*<br>ಕೊಡಗಿನ ಕಿತ್ತಲೆಹಣ್ಣು ನೀಡಿ ಗೌರಮ್ಮನವರ ಉಪವಾಸ ಕೊನೆಗೊಳಿಸಿದ ಗಾಂಧೀಜಿ ಅವರಿಗೆ ಕೊಟ್ಟ ಮಾತಿನಂತೆ ಅವರ ಮನೆಗೂ ಬಂದರು. ಆಗ ಗೌರಮ್ಮನವರು ಗಾಂಧೀಜಿಯವರ ಸ್ವಾತಂತ್ರ್ಯ ಸಂಗ್ರಾಮ ಮತ್ತು ಹರಿಜನೋದ್ಧಾರ ಸಂಬಂಧ ನಿಧಿಗೆ ತನ್ನ ಕೊರಳಿನ ಮಂಗಳಸೂತ್ರ, ಕಿವಿಯ ಓಲೆ ಮತ್ತು ಮೂಗುಬೊಟ್ಟಿನ ಹೊರತಾಗಿ ಉಳಿದೆಲ್ಲಾ ಒಡವೆಗಳನ್ನು ಮಹಾತ್ಮರ ಕೈಗೆ ಕೊಟ್ಟಾಗ ಅವರು ಅವಕ್ಕಾದರು. | |
| 20. | ಹಿಂದೂ ಪರಂಪರೆಯೊಂದಿಗೆ ಶಿಶುನಾಳ ಶರೀಫರ ಬಾಲ್ಯವು ಹೇಗೆ ಬೆರೆತುಹೋಗಿತ್ತು ?<br>*ಉತ್ತರ :*<br>ಶರೀಫರಿಗೆ ಬಾಲ್ಯದಲ್ಲಿಯೇ ರಾಮಾಯಣ, ಮಹಾಭಾರತ ಎಂದರೆ ತುಂಬಾ ಪ್ರೀತಿಯಿತ್ತು. ಅಭಿನಯದಲ್ಲಿ ಆಸಕ್ತಿ ಇದ್ದ ಕಾರಣ ರಾಮಾಯಣ, ಮಹಾಭಾರತ, ಅಲ್ಲಮಪ್ರಭು ಬಯಲಾಟಗಳಲ್ಲಿ ಪಾತ್ರವಹಿಸುತ್ತಿದ್ದರು. ಜಾತ್ರೆ, ಉತ್ಸವಗಳಲ್ಲಿ ಅನುಭವ ಕವಿಗಳಾದ ಸರ್ವಜ್ಞ, ನಿಜಗುಣಯೋಗಿ, ಸರ್ಪಭೂಷಣ ಶಿವಯೋಗಿ ಮೊದಲಾದವರ ಕಾವ್ಯ, ವಾಚನ ಮಾಡುತ್ತಿದ್ದರು. ಹೀಗೆ ಅವರ ಬಾಲ್ಯವು ಹಿಂದೂ ಪರಂಪರೆಯೊಂದಿಗೆ ಬೆರೆತು ಹೋಗಿತ್ತು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 21. | ಜಿನೋವದ ಪ್ರವಾಸಿ ಪಿತ್ರೋ ಅಬ್ಬಕ್ಕನನ್ನು ಕುರಿತು ಏನೆಂದು ಬರೆದಿದ್ದಾನೆ ?<br>***ಉತ್ತರ :***<br>ರಾಣಿ ಅಬ್ಬಕ್ಕ ಪೋರ್ಚುಗೀಸರು ಅನ್ಯಾಯವಾಗಿ ಪಡೆಯುತ್ತಿದ್ದ ವಾರ್ಷಿಕ ಕಪ್ಪವನ್ನು ವಿರೋಧಿಸಿದಳು. ಅವರ ಆರ್ಥಿಕ ಶೋಷಣೆಗೆ ತಲೆಬಾಗದ ಸ್ವಾಭಿಮಾನಿ ರಾಣಿ ಅಬ್ಬಕ್ಕದೇವಿ ವಿವೇಚನಾಶೀಲಳೂ, ನ್ಯಾಯ ಪರಳೂ, ಕುಶಲಳೂ ಆಗಿದ್ದಳು. ತನ್ನನ್ನು ಕಂಡು ರಾಣಿ, "ಅಪರಿಚಿತವಾದ ಈ ದೇಶದಲ್ಲಿ ಸುತ್ತಾಡುವಾಗ ಏನಾದರೂ ರೋಗ ರುಜಿನ ಬಂದರೆ ಒಬ್ಬಂಟಿಗರಾದ ನಿಮ್ಮನ್ನು ನೋಡುವವರ್ಯಾರು ?" ಎಂದು ಸ್ತ್ರೀ ಸಹಜ ವಾತ್ಸಲ್ಯದಿಂದ ವಿಚಾರಿಸಿದಳೆಂದು ಪಿತ್ರೋ ಬರೆದಿದ್ದಾನೆ. | |
| 22. | ಬೀಚಿಯವರು ಕನ್ನಡದ ದೀಕ್ಷೆಯನ್ನು ಸ್ವೀಕರಿಸಿದ ಶುಭ ಮುಹೂರ್ತ ಯಾವುದು ?<br>***ಉತ್ತರ :***<br>ಬೀಚಿಯವರ ಹೆಂಡತಿ ಅ.ನ.ಕೃ.ರವರ ಸಂಧ್ಯಾರಾಗ ಪುಸ್ತಕವನ್ನು ಓದಿದ ನಂತರ, "ಬಹು ಚೆನ್ನಾಗಿದೆ, ನೀವೂ ಓದಬೇಕು" ಎಂದು ಒತ್ತಾಯ ಮಾಡಿದರು. ಮರುದಿನ ರೈಲು ಪ್ರಯಾಣದಲ್ಲಿ ಓದಿದರಾಯಿತು ಎಂದುಕೊಂಡು ಬೀಚಿಯವರು ರೈಲಿನಲ್ಲಿ ಪ್ರಯಾಣ ಮಾಡುವಾಗ ಪುಸ್ತಕವನ್ನು ಓದಿದರು. ಅದನ್ನು ಓದುವಾಗ ಲೆಕ್ಕಕ್ಕೆ ಸಿಗದಷ್ಟು ಬಾರಿ ಕಣ್ಣು ತೇವವಾಯಿತು. ಹೃದಯ ಮಿಡಿಯಿತು. ಕನ್ನಡದಲ್ಲೂ ಒಳ್ಳೊಳ್ಳೆಯ ಬರಹಗಾರರು ಇದ್ದಾರೆ ಎಂಬ ಭಾವನೆ ಮೂಡಿ ಅ ಮುಹೂರ್ತದಲ್ಲಿ ಅವರು ಕನ್ನಡದ ದೀಕ್ಷೆಯನ್ನು ಸ್ವೀಕರಿಸಿದರು. | |
| 23. | ಬೀಚಿಯವರು ಟ್ರೇನಿನಲ್ಲಿ ಪುಸ್ತಕವನ್ನು ಬಚ್ಚಿಟ್ಟುಕೊಂಡು ಓದಲಾರಂಭಿಸಿದ್ದೇಕೆ ?<br>***ಉತ್ತರ :***<br>ಬೀಚಿಯವರ ಹೆಂಡತಿಗೆ ಓದಲು ಅ.ನ. ಕೃಷ್ಣರಾಯರ 'ಸಂಧ್ಯಾರಾಗ' ಪುಸ್ತಕ ತಂದುಕೊಟ್ಟಿದ್ದರು. ಅದನ್ನು ಓದಿದ ನಂತರ ಅವರ ಹೆಂಡತಿ, "ಬಹಳ ಚೆನ್ನಾಗಿದೆ, ನೀವೂ ಒಮ್ಮೆ ಓದಿ" ಎಂದು ಬಲವಂತ ಮಾಡಿದರು. ಟ್ರೇನಿನಲ್ಲಿ ಪಯಣಿಸುವಾಗ ಓದಿದರಾಯಿತು ಎಂದುಕೊಂಡು ಬೀಚಿಯವರು ರೈಲಿನಲ್ಲಿ ಕನ್ನಡ ಪುಸ್ತಕ ಕೈಲಿ ಹಿಡಿದು ಕುಳಿತರೆ ಮಾನ ಹೋಗುವುದು ಎಂದು, "ಇಲಸ್ಟ್ರೇಟೆಡ್ ವೀಕ್ಲಿ" ಕೈಲಿ ಹಿಡಿದು ಅದರಲ್ಲಿ ಕನ್ನಡ ಪುಸ್ತಕ ಬಚ್ಚಿಟ್ಟುಕೊಂಡು ಓದಲಾರಂಭಿಸಿದರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 24. | ಮನುಷ್ಯರ ನಡುವಿನ ವೈಮನಸ್ಸನ್ನು ತೊಡೆದು ಹಾಕುವ ಸತೀಶ್ ಕುಲಕರ್ಣಿಯವರ ಕನಸು ಮೆಚ್ಚುವಂತಹುದು ಹೇಗೆ ? | |
| | *ಉತ್ತರ :* | |
| | ಅಸಮಾನತೆ–ಜಾತಿ ಪದ್ಧತಿ ದೇಶದ ಅತಿದೊಡ್ಡ ಸಮಸ್ಯೆ ಆಗಿದೆ. ಅಜ್ಞಾನ, ಅನ್ಯಾಯ, ಶೋಷಣೆಗಳಿಂದ ಸಮಾಜದಲ್ಲಿ ತಾರತಮ್ಯ ಉಂಟಾಯಿತು. ಮನುಷ್ಯರ ಮನಸ್ಸುಗಳು ಒಡೆದು ವೈಮನಸ್ಸು ಉಂಟಾಯಿತು. ಈ ಒಡೆದ ಮನಸ್ಸುಗಳನ್ನು ಒಂದುಗೂಡಿಸಿ ನಾಡಿನ ಏಳಿಗೆಯ ಕನಸನ್ನು ಕಟ್ಟುತ್ತೇವೆ ಎಂಬ ಕವಿಯ ಕನಸಿನ ಆಶಾವಾದವನ್ನು ನಾವು ಮೆಚ್ಚಬೇಕು. | |
| 25. | ಕವಿಯು ಆತ್ಮವಿಶ್ವಾಸದಿಂದ ಎಂತಹ ನಾಡನ್ನು ಕಟ್ಟುತ್ತೇವೆ ಎಂದು ಹೇಳಿದ್ದಾರೆ ? | |
| | *ಉತ್ತರ :* | |
| | ಸತೀಶ ಕುಲಕರ್ಣಿಯವರು ತಾವು ಕುಲವೆನ್ನದ ಮನುಕುಲವ ಕಟ್ಟಿ ನಾಡು ಕಟ್ಟುತ್ತೇವೆ. ಗೋಳಿಲ್ಲದ, ಗುಂಡಿಲ್ಲದ ನಾಡು ಕಟ್ಟುತ್ತೇವೆ. ನೂರು ಮನಸಿನ ಕೋಟಿ ಕನಸಿನ ನಾಡು ಕಟ್ಟುತ್ತೇವೆ ಎಂದು ಆತ್ಮವಿಶ್ವಾಸದಿಂದ ಹೇಳಿದ್ದಾರೆ. | |
| 26. | ಕ್ರಾಂತಿಕಾರಿಗಳು ಕನಸಿನ ಹಾಡನ್ನು ಹೇಗೆ ಕಟ್ಟಿದ್ದಾರೆ ಎಂದು ಕವಿತೆಯು ತಿಳಿಸುತ್ತದೆ ? | |
| | *ಉತ್ತರ :* | |
| | ಕಟ್ಟತೇವ ನಾವು ಕವಿತೆಯಲ್ಲಿ ಕ್ರಾಂತಿಕಾರಿಗಳು ಕ್ರಾಂತಿ ಎಂಬ ಕೆಂಡದ ಕುಂಡ ಹೊತ್ತು ಮುಳ್ಳು ತುಳಿಯುತ್ತಾರೆ. ಅವರ ರಕ್ತ ಹರಿವ ಕಾಲಿಂದ ಅವರ ಪಾಲಿನ ಹಾಡನ್ನು ನೆಲದಲ್ಲಿ ಬರೆಯುತ್ತಾರೆ ಎಂದು ಕವಿ ಕ್ರಾಂತಿಕಾರಿಗಳು ಕನಸಿನ ಹಾಡನ್ನು ಕಟ್ಟುವ ರೀತಿಯನ್ನು ವಿವರಿಸಿದ್ದಾರೆ. | |
| 27. | ಗ್ರಂಥಾಲಯಕ್ಕೆ ಹೊಕ್ಕೊಡನೆ ಕವಿಗೆ ಆದ ಅನುಭವವನ್ನು ತಿಳಿಸಿರಿ. | |
| | *ಉತ್ತರ :* | |
| | ಗ್ರಂಥಾಲಯಕ್ಕೆ ಹೊಕ್ಕೊಡನೆ ಗ್ರಂಥಗಳ ಸಾಲು ನೋಡಿ ಕವಿಗೆ ಅಚ್ಚರಿಯಾಗುತ್ತದೆ. ಅವುಗಳ ಕೆಳಗೆ ಧೂಳಕಣವಾಗಿ ತಾವು ನಿಂತಂತೆ ಅನಿಸುವುದು. ಅಹಂಕಾರ ನುಚ್ಚುನೂರಾಗಿ ಮತಿ ಮುದುಡಿ ಹೋದಂತೆ ಭಾಸವಾಗುವುದು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 28. | ಡಾಂಭಿಕನ ಭಕ್ತಿ ನೋಡಿ ಬದಿಯಲ್ಲಿದ್ದವರಿಗೆ ಆಶ್ಚರ್ಯವಾಗಲು ಕಾರಣವೇನು ? | |
| | ***ಉತ್ತರ :*** | |
| | ಡಾಂಭಿಕ ಭಕ್ತನು ಉದಯಕಾಲಕ್ಕೆ ಏಳುತ್ತಾನೆ. ನಂತರ ಗಡ–ಗಡ ನಡುಗುತ್ತಾ ನದಿಯಲ್ಲಿ ಮೀಯುತ್ತಾನೆ. ಅವನು ಹೊರಗೆ ಶುದ್ಧನಾದರೂ ಅವನ ಅಂತರಂಗದೊಳಗೆ ಮದ, ಮತ್ಸರ, ಕ್ರೋಧ ಹಾಗೇ ತುಂಬಿಕೊಂಡಿರುತ್ತಾನೆ. ಆದರೆ ಅದನ್ನು ತಿಳಿಯದ ಜನರು ಅವನ ಭಕ್ತಿಯ ಸ್ನಾನವನ್ನು ಕಂಡು ಆಶ್ಚರ್ಯಪಡುತ್ತಾರೆ. | |
| 29. | ಪುರಂದರದಾಸರು ಡಾಂಭಿಕನ ಭಕ್ತಿಯನ್ನು ನಾಟಕಸ್ತ್ರೀಗೆ ಏಕೆ ಹೋಲಿಸಿದ್ದಾರೆ ? | |
| | ***ಉತ್ತರ :*** | |
| | ನಾಟಕಸ್ತ್ರೀಯು ಹೊಟ್ಟೆಪಾಡಿಗಾಗಿ ವೇಷಧರಿಸಿ ಅಭಿನಯಿಸುತ್ತಾಳೆ. ಡಾಂಭಿಕ ಭಕ್ತನೂ ಊಟಕ್ಕೆ ಮಾಡುವ ಕೆಲಸದಂತೆ ಬೂಟಕತನದ ಭಕ್ತಿಯನ್ನು ಎಲ್ಲರ ಮುಂದೆ ಅಭಿನಯಿಸುತ್ತಾನೆ. ಅವನ ಸಮಾನ ಭಕ್ತರೇ ಇಲ್ಲವೆನ್ನುವಂತೆ ತೋರಿಸಿಕೊಳ್ಳುತ್ತಾನೆ ಎಂದು ದಾಸರು ಹೇಳುತ್ತಾರೆ. | |
| 30. | ಈರಪ್ಪ ಎಂ. ಕಂಬಳಿಯವರು ಊರು ದಾಟುವವರೆಗೂ ತಲೆ ಕೆಳಗೆ ಹಾಕಿ ಕುಳಿತಿದ್ದೇಕೆ ? | |
| | ***ಉತ್ತರ :*** | |
| | ಲೇಖಕರು ಬಸ್ಸು ಮೇಲೆ–ಒಳಗೆ ಭರ್ತಿ ತುಂಬಿದ್ದ ಕಾರಣ ಟಾಪಿನ ಮೇಲೆ ಎಸೆದಿದ್ದ ಸ್ಟೆಪ್ನಿಯ ಟಯರಿನ ಮೇಲೆ ಕುಳಿತಿದ್ದರು. ಆದ್ದರಿಂದ ಕೆಳಗಿದ್ದವರಿಗೆ ಮೊದಲು ಕಣ್ಣಿಗೆ ಬೀಳುವವರೇ ಅವರಾಗಿದ್ದರು. ಒಂದಿಷ್ಟು ಭಯ, ನಾಚಿಕೆಗಳಿಂದ, ಯಾರಾದರೂ ಗುರ್ತಿನವರು ನೋಡುವರೆಂದು ಬಸ್ಸು ಊರು ದಾಟುವವರೆಗೂ ತಲೆ ಕೆಳಗೆ ಹಾಕಿ ಕುಳಿತಿದ್ದರು. | |
| | **ಸಂದರ್ಭಸಹಿತ ವಿವರಣೆ :** | 4 × 3 = 12 |
| | ಪದ್ಯದ ಹೆಸರು, ಕೃತಿ–ಕರ್ತೃ | 1 ಅಂಕ |
| | ಯಾರು–ಯಾರಿಗೆ, ಸಂದರ್ಭ ವಿವರಣೆಗೆ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 31. | "ಈಗ ನೀವು ನನ್ನ ವಶವಾದಿರಿ. ನಾನು ನಿಮ್ಮನ್ನು ಕೈ ಬಿಡುವಂತಿಲ್ಲ" | |
| | ***ಉತ್ತರ :*** | |
| | ಈ ವಾಕ್ಯವನ್ನು ಗೊರೂರು ರಾಮಸ್ವಾಮಿ ಅಯ್ಯಂಗಾರರ 'ಅಮೆರಿಕದಲ್ಲಿ ಗೊರೂರು' ಎಂಬ ಪ್ರವಾಸ ಕಥನದಿಂದ ಆರಿಸಲಾದ 'ಲಾಕಪ್‌ನಲ್ಲಿ ಒಂದು ರಾತ್ರಿ' ಎಂಬ ಪಾಠದಿಂದ ಆರಿಸಲಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಲೇಖಕರು ಮಿನಿ ಪೋಲೀಸ್ ನಗರದಲ್ಲಿ ದಾರಿತಪ್ಪಿ ಕೈಯಲ್ಲಿ ಹೊಟೆಲಿನಲ್ಲಿ ಉಳಿಯಲು ಬೇಕಾದಷ್ಟು ಹಣವಿಲ್ಲದೆ ಅಲೆಯುತ್ತಿದ್ದಾಗ ಸಿಕ್ಕ ಟ್ರಾಫಿಕ್ ಪೊಲೀಸ್ ಈ ಮಾತನ್ನು ಹೇಳಿದನು. | |
| | ಅಪರಿಚಿತ ವ್ಯಕ್ತಿಯನ್ನು ಪೊಲೀಸ್ ದರ್ಪ ತೋರದೇ ಸೌಜನ್ಯದಿಂದ ಮಾತನಾಡಿಸಿ ಉಪಚರಿಸುತ್ತಿರುವುದು ಸ್ವಾರಸ್ಯಕರವಾಗಿದೆ. | |
| 32. | "ತಾಯಿ ಎಂದು ಕರೆದ ಕನ್ನಡದ ಕಂದ ಯಾರು ?" | |
| | ***ಉತ್ತರ :*** | |
| | ಈ ವಾಕ್ಯವನ್ನು ವಿಜಯಲಕ್ಷ್ಮಿ ಬಾಳೇಕುಂದ್ರಿಯವರ 'ಜೀವನಧಾರೆ' ಕೃತಿಯಿಂದ ಆರಿಸಲಾದ 'ಕರ್ನಾಟಕದ ವೀರವನಿತೆಯರು' ಪಾಠದಿಂದ ಆರಿಸಲಾಗಿದೆ. | |
| | ಬೆಳಗಾವಿ ಜಿಲ್ಲೆಯ ಕಿತ್ತೂರ ಚೆನ್ನಮ್ಮ ಬ್ರಿಟಿಷರೊಡನೆ ಹೋರಾಡಿ ಸೆರೆಯಾಳಾಗುತ್ತಾಳೆ. ಆ ಸಂದರ್ಭದಲ್ಲಿ ಸೆರೆಮನಗೆ ಅವಳನ್ನು ಕಾಣಲು ಬಂದ ಸಂಗೊಳ್ಳಿ ರಾಯಣ್ಣ ಅವಳನ್ನು 'ತಾಯಿ' ಎಂದು ಸಂಬೋಧಿಸಿದಾಗ ಕಿತ್ತೂರ ಚೆನ್ನಮ್ಮ ಹೀಗೆ ಹೇಳುತ್ತಾಳೆ. | |
| | ರಾಣಿ ಹಾಗೂ ಸಾಮಾನ್ಯ ಸೈನಿಕನ ನಡುವೆಯೂ ತಾಯಿ–ಮಗನ ಬಾಂಧವ್ಯ ಇತ್ತೆಂದು ತಿಳಿಸಿರುವ ರೀತಿ ಸ್ವಾರಸ್ಯಕರವಾಗಿದೆ. | |
| 33. | "ಭೂಮಿತಾಯ ಕುಡಿಗಳೆಂದು ಪಣವ ತೊಡಿರಿ ಇಂದೆ". | |
| | ***ಉತ್ತರ :*** | |
| | ಈ ವಾಕ್ಯವನ್ನು ಪ್ರೊ. ಕೆ.ಎಸ್. ನಿಸಾರ್ ಅಹಮದ್‌ರ 'ಸಮಗ್ರ ಕವಿತೆಗಳು' ಕವನ ಸಂಕಲನದಿಂದ ಆರಿಸಲಾದ 'ಭೂಮಿತಾಯ ಕುಡಿಗಳು' ಎಂಬ ಪದ್ಯದಿಂದ ಆರಿಸಲಾಗಿದೆ. | |
| | ಕವಿಯು ಭೂಮಿತಾಯ ಮಕ್ಕಳಾದ ನಮ್ಮಲ್ಲಿ ಹಲವು ವಿಷಯಗಳಲ್ಲಿ ಭಿನ್ನತೆ ಇದ್ದರೂ ಒಂದೇ ತಾಯ ಮಕ್ಕಳೆಂಬ ಏಕತೆಯೂ ಇದೆ ಎಂದು ತಿಳಿಸಿ ಏಕತೆಯ ಪಣತೊಡಿರಿ ಎಂದು ಹೇಳುತ್ತಾ ಹೀಗೆ ಹೇಳಿದ್ದಾರೆ. | |
| | ಕವಿ ನಾವು ದೇಶ, ಭಾಷೆ, ಜಾತಿ, ಲಿಂಗ ಬೇಧ ತೊರೆದು ಭೂಮಿ ತಾಯ ಮಕ್ಕಳಾಗಿ ಒಂದಾಗಿ ಬಾಳಬೇಕು ಎಂದು ತಿಳಿಸಿರುವ ರೀತಿ ಸ್ವಾರಸ್ಯಕರವಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 34. | "ವಂಚನೆಯಿಂದಲಿ ಪೂಜೆ ಮಾಡುವುದು"<br>*ಉತ್ತರ :*<br>ಈ ವಾಕ್ಯವನ್ನು ಪುರಂದರದಾಸರ ಕುರಿತ 'ಪುರಂದರ ಸಾಹಿತ್ಯ ದರ್ಶನ' ಎಂಬ ಕೃತಿಯಿಂದ ಆರಿಸಿದ 'ಉದರ ವೈರಾಗ್ಯ' ಎಂಬ ಕೀರ್ತನೆಯಿಂದ ಆರಿಸಲಾಗಿದೆ.<br>ಪುರಂದರದಾಸರು ಡಾಂಭಿಕ ಭಕ್ತನು ಕಂಚು–ಹಿತ್ತಾಳೆಯ ಪ್ರತಿಮೆ ಇಟ್ಟು ದೀಪಗಳನ್ನು ಹಚ್ಚಿ ಮಾಡುವ ಪೂಜೆಯ ಬಗ್ಗೆ ವಿವರಿಸುವಾಗ ಹೀಗೆ ಹೇಳಿದ್ದಾರೆ.<br>ಡಾಂಭಿಕ ಭಕ್ತನ ಪೂಜೆಯ ಡಂಭಾಚಾರ ವಿವರಿಸಿ ವಂಚನೆ ಎಂದು ಸಮೀಕರಿಸಿ ಹೇಳಿರುವುದು ಸ್ವಾರಸ್ಯಕರವಾಗಿದೆ. | |
| 35. | **ಪದ್ಯಭಾಗ ಪೂರ್ಣ ಮಾಡುವುದು :**<br>(ತಪ್ಪಿಲ್ಲದೆ ಬರೆದ ಪೂರ್ಣ ಸಾಲುಗಳಿಗೆ ಒಟ್ಟು ಮೂರು ಅಂಕಗಳು)<br>ಕಣ್‌ದಿಟ್ಟಿ ...............................................................<br>...........................................................................<br>............................................................ ನಿಲ್ಲುವೆನು.<br>*ಅಥವಾ*<br>ನುಚ್ಚು ನೂರಾಗಿಸುವುದೀ ...........................................<br>...........................................................................<br>........................................................ ಬಹಲಯಕೆ!<br>*ಉತ್ತರ :*<br>ಕಣ್‌ದಿಟ್ಟಿ ಹರಿದತ್ತ ಗ್ರಂಥಗಿರಿ ಪಂಕ್ತಿಗಳು<br>ನಿಂತು ಬೆರಗೀಯುತಿವೆ ಪುಸ್ತಕಾಲಯದಲ್ಲಿ;<br>ಇವುಗಳಡಿ ನಾಧೂಳ ಕಣವಾಗಿ ನಿಲ್ಲುವೆನು–<br>*ಅಥವಾ*<br>ನುಚ್ಚು ನೂರಾಗಿಸುವುದೀ ತಾಣ ಅಪ್ಪಳಿಸಿ!<br>ಒಳಗೆ ಬಂದೆನೊ ಬೇಗ ಹೊರಗೆ ಓಡುವತವಕ–<br>ಏಕೆನಲು ಬೆದರುವೆನು ನನಗಿಲ್ಲಿ ಬಹ ಲಯಕೆ! | 1 × 3 = 3 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ಕವಿಗಳ ಕಾಲ, ಜನ್ಮಸ್ಥಳ, ಕೃತಿಗಳನ್ನು ವಿವರಿಸಿ ಬರೆಯುವುದು :** | 2 × 3 = 6 |
| | ಜನ್ಮಸ್ಥಳ, ಕಾಲಕ್ಕೆ | 1 ಅಂಕ |
| | ಕೃತಿಗೆ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 36. | *ಎಸ್.ಆರ್. ರೋಹಿಡೇಕರ್ :* | |
| | ***ಉತರ :*** | |
| | ಪ್ರೊ॥ ಎಸ್.ಆರ್. ರೋಹಿಡೇಕರ್ ಅವರು ೧೯೧೫ ಸೆಪ್ಟೆಂಬರ್ ೧೫ರಂದು ವಿಜಯಪುರದಲ್ಲಿ ಜನಿಸಿದರು. ಇವರ ಕಾವ್ಯನಾಮ 'ಶಾಮ್ ರೋಹಿಡೆ'. ಇವರು ರಚಿಸಿದ ಕೃತಿ 'ಮೂರು ಏಕಾಂಕ ನಾಟಕಗಳು'. | |
| 37. | *ಬಸವಣ್ಣ :* | |
| | ***ಉತ್ತರ :*** | |
| | ಬಸವಣ್ಣನವರು ಹನ್ನೆರಡನೆಯ ಶತಮಾನದಲ್ಲಿದ್ದ ಪ್ರಮುಖ ವಚನಕಾರರು. ಇವರ ಜನ್ಮಸ್ಥಳ ವಿಜಯಪುರ ಜಿಲ್ಲೆಯ ಬಾಗೇವಾಡಿ. ಇವರು ಅನೇಕ ವಚನಗಳನ್ನು ರಚಿಸಿದ್ದಾರೆ. ಇವರ ವಚನಗಳ ಅಂಕಿತ 'ಕೂಡಲಸಂಗಮದೇವ' ಎಂದಿದೆ. | |
| | **ಎಂಟು–ಹತ್ತು ವಾಕ್ಯಗಳಿಗೆ ಮೀರದಂತೆ ಉತ್ತರಿಸುವುದು :** | 2 × 4 = 8 |
| | ವಿಷಯಕ್ಕೆ | 3 ಅಂಕಗಳು |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 38. | ಗೋವಿಂದ ಭಟ್ಟರ ಗುಣಸ್ವಭಾವಗಳನ್ನು ನಿಮ್ಮ ಮಾತುಗಳಲ್ಲಿ ವಿವರಿಸಿರಿ. | |
| | ***ಅಥವಾ*** | |
| | ಶರೀಫರು ಮತ್ತು ಗೋವಿಂದ ಭಟ್ಟರ ನಡುವಿನ ಅನ್ಯೋನ್ಯತೆಯನ್ನು ಕುರಿತು ವಿವರಿಸಿರಿ. | |
| | ***ಉತ್ತರ :*** | |
| | ಗೋವಿಂದಭಟ್ಟರು ಕಳಸ ಗ್ರಾಮದವರು. ಜ್ಞಾನಿಗಳೂ, ವಿದ್ಯಾವಂತರೂ ಎಂದು ಹೆಸರಾಗಿದ್ದರು. ನಗೆಮುಖ ಹೊಂದಿದ್ದರು. ಒಳ್ಳೆಯ ಮಾತು ಆಡುವವರಾಗಿದ್ದರು. ಕೈಯಲ್ಲಿ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ತಾಮ್ರದ ತಂಬಿಗೆ, ಹೆಗಲ ಮೇಲೆ ಪಂಚೆ, ನಡುವಿನಲ್ಲಿ ಲಂಗೋಟಿ ಇದೇ ಅವರ ವೇಷಭೂಷಣಗಳಾಗಿತ್ತು. ಇವರು ಶಕ್ತಿಯ ಉಪಾಸಕರಾಗಿದ್ದರು. ಉದಾರ ಹೃದಯಿಗಳಾಗಿದ್ದರು. ಮಾನವಕುಲ ಒಂದೇ ಎಂಬ ಭಾವನೆ ಹೊಂದಿದ್ದರು. ಜಾತಿ–ಮತಗಳ ಬೇಧ ಮಾಡುವುದು ಇವರಿಗೆ ಆಗುತ್ತಿರಲಿಲ್ಲ. ತಮ್ಮ ಜಾತಿಯವನಲ್ಲದ ಮುಸಲ್ಮಾನ ಶಿಷ್ಯನಿಗೆ ಮುಕ್ತ ಹೃದಯದಿಂದ ವಿದ್ಯಾದಾನ ಮಾಡಿದರು. ಅಂದಿನ ಸಮಾಜ ಅವರಿಗೆ ಬಹಿಷ್ಕಾರ ಹಾಕಿದರೂ ಅವರು ಧೃತಿಗೆಡಲಿಲ್ಲ. ನಿಷ್ಠುರತೆಯಿಂದ ಸಮಾಜದ ತಪ್ಪು ನಡತೆಗಳನ್ನು ವಿರೋಧಿಸುತ್ತಿದ್ದರು. | |
| | ***ಅಥವಾ*** | |
| | ಗುರುಗಳಲ್ಲಿ ಭಕ್ತಿ, ಭಾವವನ್ನು ತೋರಿ ನಡೆಯುವವರನ್ನು ಗುರು ಪಂಥದವರೆಂದು ಕರೆಯುತ್ತಾರೆ. ಶರೀಫರು ಗುರು ಕೃಪೆಯನ್ನು ಪಡೆಯಲು ಮಠಮಂದಿರಗಳಿಗೆ ಹೋಗುತ್ತಿದ್ದರು. ಆಗ ಅವರಿಗೆ ದೊರೆತವರು 'ಗುರು ಗೋವಿಂದ ಭಟ್ಟರು'. ಅವರು ತಮ್ಮ ಮುಸಲ್ಮಾನ ಶಿಷ್ಯನಿಗೆ ಮುಕ್ತ ಹೃದಯದಿಂದ ವಿದ್ಯಾದಾನ ಮಾಡಿದರು. ಗುರು ಶಿಷ್ಯರಿಬ್ಬರೂ ಒಂದೇ ತಟ್ಟೆಯಲ್ಲಿ ಊಟ ಮಾಡುತ್ತಿದ್ದರು. ಇಬ್ಬರೂ ಕೂಡಿಕೊಂಡೇ ಇರುತ್ತಿದ್ದರು. ಇಬ್ಬರಿಗೂ ಅಂದಿನ ಸಮಾಜ ಬಹಿಷ್ಕಾರ ಹಾಕಿತ್ತು. ಹಾಳು ದೇವಾಲಯ–ಗುಡಿಗಳಲ್ಲಿ ಇರುತ್ತಿದ್ದರು. ನಿಷ್ಠುರ ಸ್ವಭಾವದವರಾದ ಅವರು ಸಮಾಜದ ತಪ್ಪು ನಡತೆಗಳನ್ನು ತಿದ್ದಿ ಮಾನವ ಕುಲದ ಹಿತ ಬಯಸುತ್ತಿದ್ದರು. ಹಳ್ಳಿಗಳಿಗೆ ಹೋಗಿ ಅಲ್ಲಿಯ ಜನರಿಗೆ ತಿಳಿಯುವಂತೆ ಉಪದೇಶ ಮಾಡುತ್ತಿದ್ದರು. | |
| 39. | ಮಳೆದೇವರಲ್ಲಿ ರೈತನ ಪ್ರಾರ್ಥನೆಯೇನು ಎಂದು ವಿವರಿಸಿರಿ. | |
| | ***ಅಥವಾ*** | |
| | 'ಜನಪದಗೀತೆ' ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ. | |
| | ***ಉತ್ತರ :*** | |
| | ರೈತರಿಗೆ ಬೇಸಾಯವು ಪ್ರಧಾನ ವೃತ್ತಿ. ಮಳೆಬಂದು ಕೆರೆ ಕಟ್ಟೆಗಳೆಲ್ಲ ತುಂಬಿ, ಹೊಲದಲ್ಲಿ ಬೆಳೆದ ಬೆಳೆ, ಗದ್ದೆಗಳಲ್ಲಿ ಬೆಳೆದು ನಿಂತ ಭತ್ತ ಇವುಗಳನ್ನು ನೋಡಿದರೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

ಅವರಿಗೆ ಸಂತೋಷ, ಸಂಭ್ರಮ ಇರುತ್ತದೆ. ಮಳೆ ಬರದಿದ್ದರೆ ಅವರಿಗೆ ಬದುಕೇ ಶೂನ್ಯವೆನಿಸುತ್ತದೆ. ಆಗ ಅವರು ಮಳೆರಾಯನಲ್ಲಿ, "ತಂದೆ, ನೀನಿಲ್ಲದೆ ಈ ಭೂಮಿ ಒಣಗಿದೆ, ಸೊಪ್ಪಂತೆ ಸೊರಗಿದೆ, ದನಕರುಗಳು ಬಡಕಲಾಗಿವೆ. ನೀ ಬಂದು ನಮಗೆ ಕರುಣೆ ತೋರೋ" ಎಂದು ಪ್ರಾರ್ಥಿಸುತ್ತಾರೆ. ಗೋಡೆಗೆ ಕಪ್ಪು ಬಳಿದ ಹಾಗೆ ಮೋಡ ಕಾಣಲಿ, ಮೂಡಲಲ್ಲಿ ಭೈರವನ ಬೆಟ್ಟದ ಮೇಲೆ ಮಳೆ ಸುರಿಯಲಿ, ಸ್ವಾತಿಯ ಮಳೆ ಸುರಿದು ಕೆರೆ ತುಂಬಿ ಬಾಳು ಹಸನಾಗಲಿ ಎಂದು ಆಶಿಸುತ್ತಾರೆ.

***ಅಥವಾ***

ಕನ್ನಡನಾಡಿನ ಅನಾಮಧೇಯ ಕವಿಗಳು ರಚಿಸಿದ ಪದ್ಯಗಳೇ ಜನಪದಗೀತೆಗಳು. ಸಮೃದ್ಧವಾಗಿ ಮಳೆಯಾಗಿ ಬೆಳೆ ಬಂದು ಜನ ಸುಖವಾಗಿರಲಿ ಎಂಬ ಆಶಯ ಜನಪದ ಗೀತೆಯಲ್ಲಿ ಬಿತ್ತರವಾಗಿದೆ. ಮೊದಲು ಜನಪದ ಕವಿ ಮಳೆಯಿಲ್ಲದೆ ಭೂಮಿ ಬರಡಾಗಿವೆ, ದನಕರುಗಳು ಸೊರಗಿವೆ, ನೀ ಬಂದು ಕರುಣಿಸೋ ಎಂದು ಮಳೆರಾಯನನ್ನು ಕುರಿತು ಪ್ರಾರ್ಥಿಸುತ್ತಾನೆ. ನಂತರ ಮುಗಿಲಲ್ಲಿ ಬಂದ ಮೋಡಗಳನ್ನು ಕಂಡು ಗೋಡೆಗೆ ಕಪ್ಪು ಬಳಿದಂತೆ ಇದೆ ಎಂದು ಸಂತೋಷ ಪಡುತ್ತಾನೆ. ಮೂಡಲಲಿ ಭೈರವ ಬೆಟ್ಟದ ಮೇಲೆ ಮಳೆ ಸುರಿಯಲಿ ಅದರಿಂದ ಒಳ್ಳೆಯ ಬೆಳೆ ಬರುವುದು ಎಂದು ಹಾಡುತ್ತಾನೆ. ಸ್ವಾತಿಯ ಮಳೆಯಿಂದ ಕೆರೆ ತುಂಬಿ ಕುಣಿಗಲು–ಕುಚ್ಚಲ ಮೀನುಗಳು ನಗುತ್ತಿವೆ ಎಂದು ಮಳೆಯನ್ನು ಕಂಡು ಸಂತಸ ವ್ಯಕ್ತಪಡಿಸುತ್ತಾನೆ.

## ವಿಭಾಗ – 'ಬಿ'

**ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** $12 \times 1 = 12$

40. ಕನ್ನಡ ವರ್ಣಮಾಲೆಯಲ್ಲಿರುವ ಒಟ್ಟು ದೀರ್ಘಸ್ವರಗಳ ಸಂಖ್ಯೆ

(ಎ) ಆರು (ಬಿ) ಏಳು

(ಸಿ) ಹದಿಮೂರು (ಡಿ) ಐದು

***ಉತ್ತರ :*** (ಬಿ) ಏಳು

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 41. | ಕೆಳಗಿನ ಪದಗಳಲ್ಲಿ ವಿಜಾತೀಯ ಸಂಯುಕ್ತಾಕ್ಷರ ಪದವಿದು<br>(ಎ) ಅಂತಃಪುರ (ಬಿ) ಕುಂಕುಮ<br>(ಸಿ) ಪುಸ್ತಕ (ಡಿ) ಕುಚ್ಚಲು<br>***ಉತ್ತರ :*** (ಸಿ) ಪುಸ್ತಕ | |
| 42. | 'ಬರೆಯುತ್ತೇವ' ಪದದ ಗ್ರಾಂಥಿಕ ರೂಪವಿದು<br>(ಎ) ಬರೇತೇನೆ (ಬಿ) ಬರೀತಾನೆ<br>(ಸಿ) ಬರೆವೆವು (ಡಿ) ಬರೆಯುತ್ತೇವೆ<br>***ಉತ್ತರ :*** (ಡಿ) ಬರೆಯುತ್ತೇವೆ | |
| 43. | ಆತ್ಮಾರ್ಥಕ ಸರ್ವನಾಮಕ್ಕೆ ಉದಾಹರಣೆಯಾಗಿರುವ ಪದವಿದು<br>(ಎ) ನಾನು (ಬಿ) ತಾನು<br>(ಸಿ) ನೀನು (ಡಿ) ಅವನು<br>***ಉತ್ತರ :*** (ಬಿ) ತಾನು | |
| 44. | 'ಹಿಮಾಲಯ' ಪದವು ಇಂತಹ ನಾಮಪದಕ್ಕೆ ಉದಾಹರಣೆಯಾಗಿದೆ<br>(ಎ) ಅಂಕಿತನಾಮ (ಬಿ) ರೂಢನಾಮ<br>(ಸಿ) ಅನ್ವರ್ಥನಾಮ (ಡಿ) ಸರ್ವನಾಮ<br>***ಉತ್ತರ :*** (ಎ) ಅಂಕಿತನಾಮ | |
| 45. | ತೃತೀಯಾ ವಿಭಕ್ತಿ ಪ್ರತ್ಯಯ<br>(ಎ) ಅ (ಬಿ) ಅಲ್ಲಿ<br>(ಸಿ) ಇಂದ (ಡಿ) ದೆಸೆಯಿಂದ<br>***ಉತ್ತರ :*** (ಸಿ) ಇಂದ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 46. | 'ಕುಡಿಗಳೆಂದು' ಪದವನ್ನು ಬಿಡಿಸಿದಾಗ ಆಗುವ ರೂಪ<br>(ಎ) ಕುಡಿಗಳು + ಹಿಂದು (ಬಿ) ಕುಡಿಗಳು + ಎಂದು<br>(ಸಿ) ಕುಡಿಗಳು + ಇಂದು (ಡಿ) ಕುಡಿಗಳು + ಮುಂದು<br>***ಉತ್ತರ :*** (ಬಿ) ಕುಡಿಗಳು + ಎಂದು | |
| 47. | "ಗೌರಿಯ ಮುಖ ಕಮಲದಂತೆ ಅರಳಿತು." ಈ ವಾಕ್ಯದಲ್ಲಿರುವ ಉಪಮೇಯ<br>(ಎ) ಅಂತೆ (ಬಿ) ಅರಳಿತು<br>(ಸಿ) ಕಮಲ (ಡಿ) ಗೌರಿಯ ಮುಖ<br>***ಉತ್ತರ :*** (ಡಿ) ಗೌರಿಯ ಮುಖ | |
| 48. | ನಿನ್ನದು ಯಾವ ಊರು ? ನಿನ್ನ ಹೆಸರೇನು ? ಇಲ್ಲಿ ಬಳಕೆಯಾಗಿರುವ ಲೇಖನ ಚಿಹ್ನೆ<br>(ಎ) ಪ್ರಶ್ನಾರ್ಥಕ ಚಿಹ್ನೆ (ಬಿ) ವಿವರಣಾತ್ಮಕ ಚಿಹ್ನೆ<br>(ಸಿ) ಅರ್ಧವಿರಾಮ ಚಿಹ್ನೆ (ಡಿ) ಭಾವಸೂಚಕ ಚಿಹ್ನೆ<br>***ಉತ್ತರ :*** (ಎ) ಪ್ರಶ್ನಾರ್ಥಕ ಚಿಹ್ನೆ | |
| 49. | 'ಸಾಬೂನು' ಪದವು ಈ ಭಾಷೆಯಿಂದ ಬಂದ ಶಬ್ದವಾಗಿದೆ<br>(ಎ) ಇಂಗ್ಲಿಷ್ (ಬಿ) ಪೋರ್ಚುಗೀಸ್<br>(ಸಿ) ಹಿಂದೂಸ್ಥಾನಿ (ಡಿ) ಸಂಸ್ಕೃತ<br>***ಉತ್ತರ :*** (ಬಿ) ಪೋರ್ಚುಗೀಸ್ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 50. | ಕೆಳಗಿನ ಪದಗಳಲ್ಲಿ ದ್ವಿರುಕ್ತಿ ಪದವಿದು<br>(ಎ) ಪಟಪಟ (ಬಿ) ಧಗಧಗ<br>(ಸಿ) ನಡೆನಡೆ (ಡಿ) ರೀತಿನೀತಿ<br>***ಉತ್ತರ :*** (ಸಿ) ನಡೆನಡೆ | |
| 51. | 'ಪರಿಚಿತ' ಪದದ ವಿರುದ್ಧಾರ್ಥಕ ರೂಪವಿದು<br>(ಎ) ಸುಪರಿಚಿತ (ಬಿ) ವಿಪರಿಚಿತ<br>(ಸಿ) ಕುಪರಿಚಿತ (ಡಿ) ಅಪರಿಚಿತ<br>***ಉತ್ತರ :*** (ಡಿ) ಅಪರಿಚಿತ | |
| | **ವಿಭಾಗ – 'ಸಿ'**<br>**(ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)**<br>**ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು :**<br>(ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ)<br>ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯ ಭಗೂರು ಎಂಬ ಚಿಕ್ಕ ಹಳ್ಳಿಯಲ್ಲಿದ್ದ ದಾಮೋದರ ಪಂತ್ ಸಾವರ್ಕರ್ ಮತ್ತು ರಾಧಾಬಾಯಿ ಎನ್ನುವ ದಂಪತಿಗಳ ಮಕ್ಕಳು ಗಣೇಶ ಮತ್ತು ವಿನಾಯಕ. ಭಾರತವು ಆಗ ಬ್ರಿಟಿಷರ ಆಳ್ವಿಕೆಯಲ್ಲಿತ್ತು. 1897 ನೇ ಇಸ್ವಿಯಲ್ಲಿ ಭಾರತದಾದ್ಯಂತ ವಿಕ್ಟೋರಿಯಾ ಮಹಾರಾಣಿಯ ಸಿಂಹಾಸನಾರೋಹಣದ ವಜ್ರಮಹೋತ್ಸವ ಆಚರಿಸುವಂತೆ ಬ್ರಿಟಿಷ್ ಸರ್ಕಾರದ ಆಜ್ಞೆಯಾಗಿತ್ತು. ಅದೇ ಸಮಯಕ್ಕೆ ಮಹಾರಾಷ್ಟ್ರದಲ್ಲೆಲ್ಲಾ ಪ್ಲೇಗಿನ ಪಿಡುಗು ಬೇರೆ! ಜನರು ನೊಣಗಳಂತೆ ಪಟಪಟನೇ ಸಾಯುತ್ತಿದ್ದರು. ಎತ್ತ ನೋಡಿದರತ್ತ ಪ್ಲೇಗಿನ ಹಾವಳಿ. ಇಂಥ ಸಂದರ್ಭದಲ್ಲಿ ಆಳರಸಿಯ ಸಿಂಹಾಸನಾರೋಹಣದ ಉತ್ಸವ ಆಚರಿಸುವುದು ದೇಶಪ್ರೇಮಿ ತರುಣರಿಗೆ ಒಪ್ಪಿಗೆಯಾಗಲಿಲ್ಲ. ಚಾಪೇಕರ್ ಸಹೋದರರು ಎಂಬ ದೇಶಭಕ್ತರು ಈ ಉತ್ಸವದ | 4 × 1 = 4 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಆಚರಣೆ ವಿರೋಧಿಸಿ ಇಬ್ಬರು ಆಂಗ್ಲ ಅಧಿಕಾರಿಗಳನ್ನು ಗುಂಡಿಟ್ಟು ಕೊಂದರು. ಚಾಪೇಕರ್ ಸಹೋದರರನ್ನು ಬಂಧಿಸಿ ಆಂಗ್ಲರು ಅವರನ್ನು ಗಲ್ಲಿಗೇರಿಸಿದರು. ಚಾಪೇಕರ್ ಸಹೋದರರ ಈ ಸಾಹಸ ಬಲಿದಾನ ಸಾವರ್ಕರ್ ಸಹೋದರರ ಮೇಲೆ ಅಚ್ಚಳಿಯದ ಪ್ರಭಾವ ಮೂಡಿಸಿತು. ಬಾಲಕ ವಿನಾಯಕನಂತೂ ಚಾಪೇಕರ್ ಸಹೋದರರ ಸಾಹಸ ಮತ್ತು ಬಲಿದಾನವನ್ನು ಕುರಿತು ವೀರ ಕವನವನ್ನು ಬರೆದನು. | |
| 52. | 1897 ರಲ್ಲಿ ಬ್ರಿಟಿಷ್ ಸರ್ಕಾರ ಹೊರಡಿಸಿದ ಆಜ್ಞೆ ಏನಾಗಿತ್ತು ? | |
| | ***ಉತ್ತರ :*** | |
| | 1897 ನೇ ಇಸ್ವಿಯಲ್ಲಿ ಭಾರತದಾದ್ಯಂತ ವಿಕ್ಟೋರಿಯಾ ಮಹಾರಾಣಿಯ ಸಿಂಹಾಸನಾರೋಹಣದ ವಜ್ರಮಹೋತ್ಸವ ಆಚರಿಸುವಂತೆ ಬ್ರಿಟಿಷ್ ಸರ್ಕಾರದ ಆಜ್ಞೆಯಾಗಿತ್ತು. | |
| 53. | ಚಾಪೇಕರ್ ಸಹೋದರರು ಉತ್ಸವ ಆಚರಿಸುವುದನ್ನು ವಿರೋಧಿಸಲು ಕಾರಣವೇನು ? | |
| | ***ಉತ್ತರ :*** | |
| | ಮಹಾರಾಷ್ಟ್ರದಲ್ಲಿ ಪ್ಲೇಗಿನ ಪಿಡುಗಿನಿಂದ ಜನರು ನೊಣಗಳಂತೆ ಪಟಪಟನೇ ಸಾಯುತ್ತಿದ್ದರು. ಇಂತಹ ಸಂದರ್ಭದಲ್ಲಿ ಉತ್ಸವ ಆಚರಿಸುವುದನ್ನು ಚಾಪೇಕರ್ ಸಹೋದರರು ವಿರೋಧಿಸಿದರು. | |
| 54. | ಆಂಗ್ಲರು ಚಾಪೇಕರ್ ಸಹೋದರರನ್ನು ಬಂಧಿಸಿ ಗಲ್ಲಿಗೇರಿಸಲು ಕಾರಣವೇನು ? | |
| | ***ಉತ್ತರ :*** | |
| | ಚಾಪೇಕರ್ ಸಹೋದರರು ಉತ್ಸವ ಆಚರಿಸುವುದನ್ನು ವಿರೋಧಿಸಿ ಇಬ್ಬರು ಆಂಗ್ಲ ಅಧಿಕಾರಿಗಳನ್ನು ಗುಂಡಿಟ್ಟು ಕೊಂದರು. ಆದ್ದರಿಂದ ಅವರನ್ನು ಗಲ್ಲಿಗೇರಿಸಲಾಯಿತು. | |
| 55. | ಚಾಪೇಕರ್ ಸಹೋದರರ ಬಲಿದಾನ ವಿನಾಯಕನ ಮೇಲೆ ಯಾವ ಪ್ರಭಾವವನ್ನು ಮೂಡಿಸಿತು ? | |
| | ***ಉತ್ತರ :*** | |
| | ಚಾಪೇಕರ್ ಸಹೋದರರ ಸಾಹಸ–ಬಲಿದಾನ ಅಚ್ಚಳಿಯದ ಪ್ರಭಾವ ಬೀರಿತು. ವಿನಾಯಕ ಈ ಸಾಹಸ–ಬಲಿದಾನ ಕುರಿತು ವೀರ ಕವನವನ್ನು ಬರೆದನು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 56. | **ಗಾದೆಯ ಮಾತನ್ನು ವಿಸ್ತರಿಸಿ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** | 1 × 3 = 3 |
| | * ಮನಸ್ಸಿದ್ದರೆ ಮಾರ್ಗ | |
| | * ಕೈ ಕೆಸರಾದರೆ ಬಾಯಿ ಮೊಸರು | |
| | * ಉಪ್ಪಿಗಿಂತ ರುಚಿಯಿಲ್ಲ; ತಾಯಿಗಿಂತ ಬಂಧುವಿಲ್ಲ | |
| | ***ಉತ್ತರ :*** | |
| | ಗಾದೆಯ ಮಹತ್ವ | 1 ಅಂಕ |
| | ಗಾದೆಯ ಅರ್ಥ / ವಿವರಣೆ | 1 ಅಂಕ |
| | ಭಾಷಾಶೈಲಿ / ಉದಾಹರಣೆ | 1 ಅಂಕ |
| | ಒಟ್ಟು | 3 ಅಂಕಗಳು |
| 57. | **ಪತ್ರ ಲೇಖನ ಬರೆಯುವುದು :** | 1 × 4 = 4 |
| | ನಿಮ್ಮನ್ನು ಬೆಂಗಳೂರಿನ ಬಸವನಗುಡಿಯ ಮಾದರಿ ಪ್ರೌಢಶಾಲೆಯಲ್ಲಿ ಓದುತ್ತಿರುವ ವಿದ್ಯಾರ್ಥಿ 'ಸತ್ಯಾರ್ಥ' ಎಂದು ಭಾವಿಸಿಕೊಂಡು, ನಿಮ್ಮ ಮನೆಯಲ್ಲಿ ಸಮಾರಂಭವಿರುವ ಕಾರಣ ಶಾಲೆಗೆ ಎರಡು ದಿನ ಬರಲು ಸಾಧ್ಯವಿಲ್ಲವೆಂದು ತಿಳಿಸಿ ನಿಮ್ಮ ತರಗತಿ ಶಿಕ್ಷಕರಿಗೆ ರಜಾ ಅರ್ಜಿಯೊಂದನ್ನು ಬರೆಯಿರಿ. | |
| | ***ಅಥವಾ*** | |
| | ನಿಮ್ಮನ್ನು ಚಿತ್ರದುರ್ಗದ ಕಸ್ತೂರಿಬಾಯಿ ವಸತಿ ಶಾಲೆಯಲ್ಲಿ ಓದುತ್ತಿರುವ ವಿದ್ಯಾರ್ಥಿನಿ 'ಕಾತ್ಯಾಯಿನಿ' ಎಂದು ಭಾವಿಸಿಕೊಂಡು, ಬೆಂಗಳೂರಿನಲ್ಲಿರುವ ನಿಮ್ಮ ತಂದೆಯವರಿಗೆ ನಿಮ್ಮ ವಿದ್ಯಾಭ್ಯಾಸದ ಪ್ರಗತಿಯನ್ನು ಕುರಿತು ಪತ್ರವೊಂದನ್ನು ಬರೆಯಿರಿ. | |
| | ***ಉತ್ತರ :*** | |
| | ವ್ಯಾವಹಾರಿಕ ಪತ್ರ : | |
| | ಇಂದ, ಗೆ, ವಿಳಾಸ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸಳ, ದಿನಾಂಕ, ವಿನ್ಯಾಸ, ಸಹಿಯೊಂದಿಗೆ ಮುಕ್ತಾಯ, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| | ***ಅಥವಾ*** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ವೈಯಕ್ತಿಕ ಪತ್ರ : | |
| | ಇಂದ ವಿಳಾಸ / ಸಂಬೋಧನೆ, ದಿನಾಂಕ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಗೆ ವಿಳಾಸ, ವಿನ್ಯಾಸ, ಸಹಿಯೊಂದಿಗೆ ಮುಕ್ತಾಯಿ, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 58. | **ಪ್ರಬಂಧ ಬರೆವಣಿಗೆ :** | 1 × 4 = 4 |
| | * ಶಾಲೆಗಳಲ್ಲಿ ಗ್ರಂಥಾಲಯಗಳ ಉಪಯುಕ್ತತೆ | |
| | * ಅರಣ್ಯ ನಾಶದಿಂದಾಗುವ ದುಷ್ಪರಿಣಾಮಗಳು | |
| | * ಶಿಕ್ಷಕರ ದಿನಾಚರಣೆಯ ಪ್ರಾಮುಖ್ಯತೆ | |
| | ***ಉತ್ತರ :*** | |
| | ಪೀಠಿಕೆ / ಪ್ರಸ್ತಾವನೆ | 1 ಅಂಕ |
| | ವಿಷಯ ಜೋಡಣೆ | 1 ಅಂಕ |
| | ಮುಕ್ತಾಯ / ಉಪಸಂಹಾರ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |